ಪಡೆದು ಪುನೀತರಾದೊರಂತೆ ಎದ್ದು ಹೋಗ್ತಿದ್ರು. ದೇವ್ರು ಹೊತ್ತ ಬಸಪ್ಪ ತನ್ನ ಕೈಲಿರೊ ಚಾವಟಿಯಿಂದ ಜೋರಾಗಿ ಎಳ್ದು ಬೆನ್ಮೇಲೆ ಬಾರಿಸುತ್ತಿದ್ದ. ಅದು ಹನ್ಮಪ್ಪ ನೀಡೊ ಚಲೊ ಆಶೀರ್ವಾದ ಅಂತ ಜನ ನಂಬ್ತಿದ್ರು. ಏಟು ಪಡ್ದೊರೆಲ್ಲ ದೇವ್ರ ನಿಗಾ ತಮ್ಮ ಮ್ಯಾಲೆ ಐತೆ ಅಂತ ಭಾವಿಸಿ ವಿನೀತರಾಗ್ತಿದ್ರು. ಇಂತಿಪ್ಪ ವಿಧಿವಿಧಾನವುಳ್ಳ ಹೊಂಡದೇವ್ರು ಹೊರಡದೇ ಇರುವುದು ಜನರ ಚಿಂತೆಗೀಡು ಮಾಡಿತ್ತು. ಊರಿಗೆ ಊರೇ ಕಂಗಲಾಗಿತ್ತು. ಸಣ್ಣೀರ ಸಾವಿಂದ ಹಿಲಾಲು ಹಿಡಿಯೋರು ಯಾರೂ ಇಲ್ಲದ ಕಾರಣ ಅದೆಲ್ಲವೂ ನಿಂತಿತ್ತು. ಹಿಲಾಲು ಹಿಡಿಯಾಕೆ ಹೊಲಗೇರಿಯೊರೆ ಆಗ್ಬೇಕು. ಅದ್ರಲ್ಲೂ ಹತ್ತು ವರ್ಷದೊಳಗಿನ ಹುಡುಗನೇ ಆಗ್ಬೇಕು. ಹತ್ತು ವರ್ಷದ ಹುಡುಗನಿಗೆ ಗುಡಿ ಮುಂದೆ ನಿಲ್ಸಿ ಕೆಂಪು ನೀರು ಸುರಿಬೇಕು. ಆ ಹಸಿ ಮೈಯಲ್ಲೆ ಅವ್ನು ತಂಗ್ಯಾಮ್ಮನ ಗುಡಿ ದೀಪದಿಂದ ಹಿಲಾಲು ಹೊತ್ತಿಸ್ಕೊಂಡು ಬರಬೇಕು. ಅವೊತ್ತಿಂದ ಅವ್ನು ಹಿಲಾಲು ಹಿಡಿಯೊ ಕಾರ್ಯ ಗುರುತರವಾಗುತ್ತದೆ. ಸಾಯೊವರೆಗೂ ಅವ್ನು ಪ್ರತಿ ಶನಿವಾರ ಹೊಂಡದೇವ್ರಿಗೆ ತಪ್ಪದೆ ಹಿಲಾಲು ಹಿಡಿಬೇಕು. ಹಿಲಾಲು ಹಿಡಿಯೊರಿಗೆ ಊರಿನ ಪ್ರತಿ ಮನೆಯವ್ರು ಧವಸ ಧಾನ್ಯನೊ, ಕಾಸನ್ನೊ ವರ್ಷಕ್ಕೊಮ್ಮೆ ನೀಡ್ಬೇಕು. ಅದು ಅಲ್ಲಿನ ನೇಮ.

ಸಣ್ಣೀರ ಸತ್ಮೇಲೆ ಹಿಲಾಲು ಹಿಡಿಯೋದು ಯಾರು ಅನ್ನುವ ಪ್ರಶ್ನೆಯಲ್ಲೆ ನಾಲ್ಕು ತಿಂಗಳು ಕಳೆದಿತ್ತು. ಗುಡಿಯ ಧರ್ಮದರ್ಶಿಯೂ, ಊರು ಪಂಚಾಯ್ತಿ ಮುಖಂಡನೂ, ಕಳೆದಬಾರಿ ಎಂಎಲ್ಎ ಎಲೆಕ್ಷನ್ ನಿಂತು ಸೋತವನಾಗಿದ್ದ ಚೂಪು ಮೀಸೆಯ ಮಾದೇಗೌಡ ನಿಂಗಪ್ಪ ಪಟೇಲಪ್ಪ ಯಾವ್ದೊ ಪ್ಲಾನು ಮಾಡಿ ಇಷ್ಟು ದಿನ ಮುಂದೆ ತಳ್ಳಿದ್ದ. ನೂರು ಎಕರೆ ಜಮೀನ್ದಾರನಾಗಿದ್ದ ನಿಂಗೇಗೌಡರ ಏಕೈಕ ಕುಲಪುತ್ರನಾದ ಮಾದೇಗೌಡ ಪಟೇಲನು ಅಪ್ಪನ ಗತ್ತಿನಲ್ಲೇ ಊರನ್ನು ತನ್ನ ಬಿಗಿಯಲ್ಲಿ ಇಟ್ಟುಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದ. ಪಟೇಲಿಕೆ, ಗೌಡಿಕೆ ನಡೆಯದ ಕಾಲದಲ್ಲಿದ್ದರೂ ಜನ ಪಟೇಲಪ್ಪ ಎಂದರೆ ಹೆದರಿ ದೂರ ಇರುತ್ತಿದ್ದರು.

ದೊಡ್ಡ ಪಕ್ಷದ ಮುಂದಾಳು, ಮಂತ್ರಿಗಳ ಜೊತೆ ಗುರುತಿಸಿಕೊಂಡವನು ಆದ ಪಟೇಲಪ್ಪನ ಒಳತಂತ್ರಗಳು ಬೇರೇನೆ ಇರುತ್ತಿದ್ದವು. ಯಾರಾದ್ರೂ ಎದುರು ಮಾತಾಡಿದ್ರೆ ರೇಷನ್ ಕಾರ್ಡು ರದ್ದು ಮಾಡ್ಸೋದು, ಯಾವುದೊ ಕಾರಣ ಹಿಡಿದು ಮನೆ ಒಡೆಸಿ ಹಾಕೋದು, ಬ್ಯಾಂಕಿನಲ್ಲಿ ಸಾಲ ಸಿಗದಂಗೆ ಮಾಡೋದು, ಹುಡುಗರನ್ನು ಬಿಟ್ಟು ಗಲಾಟೆ ಎಬ್ಸೋದು ಹೀಗೆ ಏನಾದ್ರೂ ಒಂದನ್ನು ಮಾಡಿ ತನಗೆ ಮಾತ್ರ ಏನೂ ಗೊತ್ತಿಲ್ಲದ ಹಾಗೆ ಉಳಿದುಬಿಡುತ್ತಿದ್ದ.

ಪಟೇಲಪ್ಪನ ಮಾತೇ ಊರಲ್ಲಿ ಶಾಸನವಾಗಿತ್ತು. ಹನ್ಮಪ್ಪನ ಪರಮ ಭಕ್ತನೂ ಪಂಚಾಯ್ತಿಯಲ್ಲಿ ಧರ್ಮಬೀರುವೂ ಆಗಿದ್ದಾನೆಂದು ಪರವೂರಿನವ್ರು ಮಾತಾಡಿಕೊಳ್ತಿದ್ದರು. ಆದ್ರೆ ಅದೇ ಊರಿನ ಜನ ಪಟೇಲರ ಬಗ್ಗೆ ಯಾವ ಮಾತನ್ನೂ ಕೂಡ ಆಡಲು ಹೆದರುತ್ತಿದ್ದರು. ಮಾತು ಆಡಿದ್ರೆ ಮಾತೇ ಇರದಂತೆ ಸದ್ದಿಲ್ಲದೆ ಮಾಡಿ ಮುಗ್ಸಿ ಜನರ ಮುಂದೆ 'ಛೆ ಛೇ... ಹಿಂಗಾಯ್ತೆ?' ಅಂತ ಲೊಚಗುಟ್ಟೋದು ಅವನಿಗೆ ಚೆನ್ನಾಗಿ ಗೊತ್ತಿತ್ತು.

ಮಾದ್ರ ಹಲಗೆ ಹನುಮಗೆ ಹೇಳಿ 'ನಾಳೆ ಪಂಚಾಯತಿಗೆ ಮನೆಗೊಬ್ರು ಬರ್ಬೇಕಂತ್ರಪ್ಪೊ...' ಅಂತ ಡಂಗುರ ಸಾರೋಕೆ ಹೇಳಿದವನೆ ಪಟೇಲಪ್ಪ. ಅಂತೆಯೆ ಹನುಮ ಹಲಗೆ ಹೊಡ್ಕೊಳ್ತಾ ಮೂರುಸಂಜೆಗೆ ಊರೊಳೊಗೆ ಹೊರಟಿದ್ದ.

* * *

ಸಣ್ಣ ಹುಡ್ಗನಾಗಿದ್ದಿಂದ ಸಣ್ಣೀರ ಪಟೇಲರ ಮನೇಲಿ ಸಂಬಳಕ್ಕಿದ್ದ. ಪಟೇಲರ ಅಪ್ಪ ನಿಂಗೇಗೌಡ್ರು ವರ್ಷಕ್ಕೆರಡು ಬಟ್ಟೆ, ಸಾವ್ರ ರೂಪಾಯಿ ಕೂಲಿ ಕೊಡ್ತಿದ್ರು. ಹಿಲಾಲು ಹಿಡಿಯೊ ಬಾಬ್ತು ಬಂದಾಗ ಸಂಬಳ ಬಿಟ್ಟು ಸಣ್ಣಪ್ಪ ಮನೇಲಿದ್ದ. ಅದು ಮನೆಯಾಗಿದ್ರು ಮನೆಯಂಗೆ ಇರ್ಲಿಲ್ಲ. ನಾಡ ಹೆಂಚು ಹೊದಿಸಿದ ಒಂದು ಸಣ್ಣ ಕಿಟಕಿ ಇರುವ ಜನತಾ ಮನೆ ಅವನದು. ಹೊಲೆಗೇರಿ ಯಾವ ಮನೆಗಳೂ ಇದಕ್ಕಿಂದ ಭಿನ್ನವಿರಲಿಲ್ಲ. ಮನೇಲಿ ಸಣ್ಣೀರ ಮತ್ತು ವಯಸ್ಸಾದ ಅವರ ಸಣ್ಣಪ್ಪನ ಬಿಟ್ಟರೆ ಹೆಣ್ಣು ಜೀವ ಯಾವ್ದೂ ಇರಲಿಲ್ಲ. ಸಣ್ಣೀರನ ಅವ್ವ ಜ್ವರ ಬಂದು ಎರಡೇ ದಿನ ಸರ್ಕಾರಿ ಆಸ್ಪತ್ರೆಯಲ್ಲಿ ಮಲಗಿ ಹೆಣವಾಗಿ ಊರಿನ ಮಣ್ಣು ಸೇರಿದ್ದಳು.

ಸಣ್ಣೀರ ಪಟೇಲರ ಮನೆಯ ದನಗಳ ಚಾಕ್ರಿ, ಹೊಲ್ದಾಗೆ ಕೆಲ್ಸ, ಸಂಜೆಗೆ ಎರಡು ಪಾಕೆಟು ಸಾರಾಯಿ, ರಾತ್ರಿ ಮುದ್ದೆ, ಐವತ್ತು ರೂಪಾಯಿ ಕೂಲಿಗೆ ಒಗ್ಗಿಕೊಂಡು ದಿನ ಕಳೀತಿದ್ದ. ಹರೆಯಕ್ಕೆ